**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ ಮಿಸ್ 221/2017**

ಪಿ ಡಬ್ಲ್ಯೂ-1

**ದಿನಾಂಕ 24-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಶ್ರೀ ಜಿ ಆರ್ ಎದುರುದಾರರ ಪರ ವಕೀಲರುಃ**

ಲಕ್ಷ್ಮಣ ನಮ್ಮ ಮಾವ. ಅದೇ ರೀತಿ ರೇಣುಕಾ ನಮ್ಮ ಅತ್ತೆ ಎಂದರೆ ಸರಿ. ಬಸವಯ್ಯ ಮತ್ತು ಗೌರಮ್ಮ ರವರು ನಮ್ಮ ಅತ್ತೆ ರೇಣುಕಾರವರ ತಂದೆ ತಾಯಿ ಎಂದರೆ ಸರಿ. ನಮ್ಮ ಮಾವ ಲಕ್ಷಣ ರವರ ತಂದೆ ತಾಯಿ ಸಾಕಮ್ಮ ಮತ್ತು ರಾಮಯ್ಯ. ಅವರಿಗೆ ಒಟ್ಟು ಎಷ್ಟು ಜನ ಮಕ್ಕಳಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ಆದರೆ ನಮ್ಮ ಮಾವ ಮಾತ್ರ ನನಗೆ ಗೊತ್ತಿರುತ್ತಾರೆ.

2. ನಿಪಿ 3 ರಲ್ಲಿರುವ ಸ್ವತ್ತು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿರುವುದಿಲ್ಲ. ಆದರೆ ದಾಖಲೆಯನ್ನು ಒದಗಿಸಿರುತ್ತೇನೆ. ನಮ್ಮ ಅತ್ತೆ ಮತ್ತು ಮಾವನ ಹೆಸರಿನಲ್ಲಿ ಯಾವುದೇ ಚಿರಾಸ್ಥಿಗಳು ಇಲ್ಲ ಎಂದರೆನನಗೆ ಗೊತ್ತಿರುವುದಿಲ್ಲ. ನಿಪಿ 3 ರಲ್ಲಿನ ಸ್ವತ್ತು ಮತ್ತು ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ನಮ್ಮ ಅತ್ತೆ ಮಾವನ ಹೆಸರು ಇರುವುದಿಲ್ಲ. ನಿಪಿ 4 ರಿಂದ 13 ರಲ್ಲಿನ ದಾಖಲೆಗಳು ಯಾವು ಸಹ ನಮ್ಮ ಅತ್ತೆ ಮತ್ತು ಮಾವನ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

3. ನಿಪಿ 4 ರಿಂದ 13 ರವರೆಗೆ ತೋರಿಸಿರುವ ಪಹಣಿಯಲ್ಲಿನ ದಾಖಲೆಗಳಲ್ಲಿನ ಬಸವಯ್ಯ ರವರಿಗೆ ಸದರಿ ಸ್ವತ್ತುಗಳು ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ. ನಿಪಿ 4 ರಿಂದ 13 ರ ಸ್ವತ್ತುಗಳ ಮೇಲೆ ನಮ್ಮ ಅತ್ತೆ, ಮಾವ ಮತ್ತು ನನ್ನ ಗಂಡನಿಗೆ ಯಾವ ಅಧಿಕಾರ ಮತ್ತು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರುಣಕುಮಾರ, ಲಕ್ಷಣ, ರೇಣುಕಾ, ಬಸವಯ್ಯ

ಮತ್ತು ಗೌರಮ್ಮ ರವರುಗಳ ವಿರುದ್ದ ನಿಪಿ 14 ರಂತೆ ಖಾಸಗೀ ದೂರನ್ನು ದಾಖಲು ಮಾಡಿದ್ದೇನೆ ಎಂದರೆ ಸರಿ.

4. ನಿಪಿ 14 ರಲ್ಲಿ ನಾನು ನನ್ನ ಗಂಡ ಅರುಣಕುಮಾರವರಿಗೆ ವರದಕ್ಷಿಣೆಗಾಗಿ 50 ಗ್ರಾಂ ಚಿನ್ನ 1 ಲಕ್ಷ ನಗದು ಹಾಗೂ ಒಂದು ಹೀರೋ ಸ್ಲೆಂಡರ್ ಪ್ಲಸ್ ದ್ವಿಚಕ್ರ ವಾಹನವನ್ನು ನೀಡಿದ್ದಾಗಿ ನನ್ನ ಖಾಸಗೀ ದೂರಿನ 3 ನೇ ಪ್ಯಾರಾದಲ್ಲಿ ತಿಳಿಸಿದ್ದು ಸದರಿ ಹೇಳಿಕೆಗಳಿಗೆ ನನ್ನ ಬಳಿ ದಾಖಲೆಗಳು ಇವೆ. ನಾನು ಮೇಲೆ ತಿಳಿಸಿದ ಹಾಗೆ ಯಾವುದೇ ನಗದು ಚಿನ್ನ ಮತ್ತು ಬೈಕ್ ನ್ನು ವರದಕ್ಷಿಣಯಾಗಿ ಕೊಡದೆ ಇದ್ದರೂ ಸಹ ಸುಳ್ಳು ಮಾಹಿತಿಯನ್ನು ನೀಡಿ ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

5. ನಾನು ನಿಪಿ 16 ಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ ಹೋಗಿ ಯಾವುದೇ ದಾಖಲೆಯನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣವನ್ನುದಾಖಲು ಮಾಡಿ ಸುಳ್ಳು ದಾಖಲೆಗಳನ್ನು ದಿನೀಡಿ ಆರೊಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಯಾದೇ ತಪ್ಪನ್ನು ಮಾಡದೇ ಇದ್ದರೂ ಸಹ ಪೊಲೀಸರು ಜೊತೆ ಶಾಮೀಲಾಗಿ ಅವರ ವಿರುದ್ಧ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

6. ನಿಪಿ 14 ನೇ ಕಲಂ 14 ರಲ್ಲಿ ತಿಳಿಸಿರುವ ಸಾಕ್ಷಿದಾರರುಗಳಾದ ಚಾಸಾ 4 ರಿಂದ 7 ರವರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ಅವರು ನಮ್ಮ ಗ್ರಾಮಸ್ಥರು. ಸಾಕ್ಷಿದಾರುಗಳನ್ನು ನಾನು ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ನಾನು ಸಲ್ಲಿಸಿರುವ ದಾಖಲೆಗಳಿಗೂ ಹಾಗೂ ನಮ್ಮ ಅತ್ತೆ, ಮಾವ ಮತ್ತು ಗಂಡನಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಏನು ಕೆಲಸ ಮಾಡುತ್ತಿದ್ದಾನೆ ಎಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ನನ್ನ ಗಂಡನಿಗೆ ಅದಾಯ ಯಾವ ಮೂಲದಿಂದ ಬರುತ್ತಿದೆ ಎಂದು ನನಗೆ ಗೊತ್ತಿರುವುದಿಲ್ಲ.

7. ನನ್ನ ಗಂಡನ ಹೆಸರಿನಲ್ಲಿ ಯಾವುದೇ ವಾಸದ ಮನೆಗಳು ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಕೂಲಿ ಕೆಲಸವನ್ನು ಮಾಡುತ್ತೇನೆ. ಕೂಲಿ ಕೆಲಸಕ್ಕೆ ಹೋದರ ದಿನಕ್ಕೆ ರೂ ಪಾಯಿ 150 ಗಳನ್ನು ಕೊಡುತ್ತಾರೆ. ನಾನು ಹುಟ್ಟಿ ಬೆಳೆದ ತವರು ಮನೆ ಇದೆ. ನಾನು ನಮ್ಮ ಅಣ್ಣನ ಜೊತೆ ಅಣ್ಣನ ಮನೆಯಲ್ಲಿ ವಾಸವಾಗಿದ್ದೇನೆ. ನಾನು ಹುಟ್ಟಿಬೆದ ಮನೆ ನಮ್ಮ ಸ್ವಂತ ಮನೆ ನಮ್ಮ ತಂದೆ ತಾಯಿಯವರಿಗೆ ಯಾವುದೇ ಜಮೀನು ಇರುವುದಿಲ್ಲ. ಅದೇ ರೀತಿ ಸಹೋದರರ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ.

8. ನಾನು ನನ್ನ ಜೀವನವನ್ನು ನಾನೇ ಕೂಲಿ ಕೆಲಸ ಮಾಡಿ ಸಾಗಿಸುತ್ತಿದ್ದೇನೆ. ನನಗೆ ಆಗಾಗ ಆರೋಗ್ಯ ಕೆಡುತ್ತದೆ ಮತ್ತು ತಲೆ ಸುತ್ತು ಸಹ ಇದೆ. ನನಗೆ ದುಡಿಯುವ ಬದುಕುವ ಸಾಮರ್ಥ್ಯ ಇದೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಗಂಡನಿಗೆ ಯಾವುದೇ ದುಡಿಯುವ ಶಕ್ತಿ ಇಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ